ಪ್ರಾಪ್ತ ವಯಸ್ಸಿಗೆ ಬರುವ ಮೊದಲೇ ಹೆಣ್ಣುಮಕ್ಕಳಿಗೆ ವಿವಾಹ ಮಾಡುವ ಪದ್ಧತಿಯೊಂದು ಹಿಂದಿತ್ತು(ಈಗ ಇಲ್ಲವೆಂದಲ್ಲ!). ಆಮೇಲೆ ಜನಕ್ಕೆ ಸ್ವಲ್ಪ ಬುದ್ಧಿಬಂತು. 21ಕ್ಕೆ ಪದವಿ. 22ಕ್ಕೆ ಮದುವೆ. 25ಕ್ಕೆ ತಾಯ್ತನ. ಅಷ್ಟಕ್ಕೆ ಹೆಣ್ಣಿನ ಬದುಕು ಮುಕ್ತಾಯ. ಆನಂತರ ಏನಿದ್ದರೂ ಗಂಡ-ಮಕ್ಕಳೊಂದಿಗೆ ಸಂಸಾರದಲ್ಲಿ ಏಗುವುದು ಇದ್ದೇ ಇದೆ ಎನ್ನುವಂತಾಗಿತ್ತು.

ಈಗ ಕಾಲ ಬದಲಾಗಿದೆ. ಇಂದಿನ ಯುಗದಲ್ಲಿ ಇಡೀ ಪ್ರಪಂಚವೇ ಮಾರಾಟದ ಸರಕಿನಂತಾಗಿದೆ. ಜೀವನವೂ ಇದಕ್ಕೆ ಹೊರತಲ್ಲ. ಎಲ್ಲ ಕಟ್ಟುಪಾಡುಗಳೂ ಸಡಿಲಾಗಿವೆ. ಈಗಿನ ಜಮಾನಾದ ಹೆಣ್ಣಿಗೆ ಸಂಬಂಧ ಮುಖ್ಯವೇ ಹೊರತು ಮದುವೆಯೆಂಬ ಕಟ್ಟುಪಾಡಲ್ಲ. 28 ವರ್ಷಕ್ಕೆ ಹುಡುಗನೊಟ್ಟಿಗೆ ಸಂಬಂಧ(ಅಂದ್ರೆ ಲಿವ್ ಇನ್ ಸಂಸ್ಕೃತಿಗೆ ಶರಣು). 30ನೇ ವಯಸ್ಸಿಗೆ ಸ್ವಂತ ಮನೆ ಹೊಂದುವುದು. 32ಕ್ಕೆ ಮದುವೆ ಆಗೋದು. ಹೀಗಂತ 'ಗಾರ್ಡಿಯನ್' ಪತ್ರಿಕೆಯ ಸಮೀಕ್ಷೆಯೊಂದು ಹೇಳುತ್ತದೆ. ಅಂತೆಯೇ ಈ ಹೊತ್ತಿನ ಮಹಿಳೆ ವೃತ್ತಿಗೆ ಮೊದಲ ಆದ್ಯತೆ ಕೊಟ್ಟು ಜೀವನ ಪಯಣದಲ್ಲಿ ಯಶಸ್ವಿಯಾಗಿ ಸಾಗುತ್ತಿದ್ದಾಳೆ.



ಜಯಮಾಲ

'ಅಂತಾರಾಷ್ಟ್ರೀಯ ಮಹಿಳಾ ದಿನ'ದಂದು ಪ್ರೀತಿ-ವೃತ್ತಿ ಎರಡಲ್ಲಿ ಯಾವುದಕ್ಕೆ ಇಂದಿನ ಮಹಿಳೆಯ ಆದ್ಯತೆ ಎಂಬುದನ್ನು ಕುರಿತು ಬೆಂಗಳೂರು ಟೈಮ್ಸ್ ಕೆಲ ಮಹಿಳೆಯರನ್ನು ಮಾತನಾಡಿಸಿದೆ.

ಅಕ್ಷರ ಪ್ರತಿಷ್ಠಾನದ ಅಧ್ಯಕ್ಷೆ ರೋಹಿಣಿ ನಿಲೇಕಣಿ, 'ಮಹಿಳೆ ತನ್ನ ವೈಯಕ್ತಿಕ ಬದುಕು ಹಾಗೂ ವೃತ್ತಿ ಎರಡನ್ನೂ ಸಮತೋಲನ ಮಾಡಿಕೊಂಡು ಸಾಗುವುದು ಉತ್ತಮ ಎನಿಸುತ್ತದೆ. ನಾನು ಮದುವೆಯಾದಗ ನನ್ನ ವಯಸ್ಸು 21. ಆಗ ನಾನು ಪತ್ರಕರ್ತೆಯಾಗಿದ್ದೆ' ಎನ್ನುತ್ತಾರೆ.

'ಮಹಿಳೆಗೆ ತನಗೋಸ್ಕರ, ಕುಟುಂಬಕ್ಕಾಗಿ ಹಾಗೂ ಭವಿಷ್ಯದ ದೃಷ್ಟಿಯಿಂದ ಆರ್ಥಿಕ ಸ್ವಾವಲಂಬನೆ ಗಳಿಸುವುದು ಬಹಳ ಮುಖ್ಯ. ಹೊಸ ಆರ್ಥಿಕತೆಯಿಂದಾಗಿ ಉತ್ತಮ ಉದ್ಯೋಗವಕಾಶಗಳು ಸಿಕ್ಕಿವೆ. ಅವುಗಳನ್ನು ಸಮರ್ಥವಾಗಿ ಬಳಸಿಕೊಂಡು ಸಾಗಿದಾಗ ಸಮಾಜಕ್ಕೆ, ದೇಶದ ಆರ್ಥಿಕತೆಗೆ ಕೊಡುಗೆ ನೀಡಿದಂತಲ್ಲವೇ' ಎಂಬ ಅಭಿಪ್ರಾಯ ವ್ಯಕ್ತಪಡಿಸುತ್ತಾರೆ ರೋಹಿಣಿ.



ರೋಹಿಣಿ ನಿಲೇಕಣಿ

ನಟಿ ಜಯಮಾಲಾ 'ನಾನು ನನ್ನ 8ನೇ ವಯಸ್ಸಿಗೆ ಹಾಡಲು ಶುರು ಮಾಡಿ 10 ರೂಪಾಯಿ ಸಂಪಾದಿಸುತ್ತಿದ್ದೆ. 13ನೇ ವಯಸ್ಸಿಗೆ ಚಿತ್ರರಂಗ ಪ್ರವೇಶಿಸಿದೆ. ಮದುವೆಯೂ ಆದೆ. ವೃತ್ತಿ ಜೀವನ ಹಾಗೂ ಸಂಸಾರ ಎರಡನ್ನೂ ನಿಭಾಯಿಸಿದೆ. ವೃತ್ತಿಯು ಮಹಿಳೆ ತನ್ನ ಬಗ್ಗೆ ಸೂಕ್ತ ನಿರ್ಧಾರಗಳನ್ನು ತೆಗೆದುಕೊಳ್ಳಲು ಸಹಕಾರಿಯಾಗುತ್ತದೆ. ಇಷ್ಟು ವರ್ಷಗಳ ಕಾಲ ಸಮಾನತೆಗಾಗಿ ಹೋರಾಟ ನಡೆಸಿದ್ದರ ಪರಿಣಾಮ ಇಂದು ಮಹಿಳೆ ಸ್ವಾವಲಂಬಿಯಾಗಿದ್ದಾಳೆ. ಹೀಗಾಗಿ ವೃತ್ತಿಗೆ ಆದ್ಯತೆ ಕೊಡುವುದು ತಪ್ಪಲ್ಲ' ಎಂದು ಪ್ರತಿಪಾದಿಸುತ್ತಾರೆ.

ಮತ್ತೊಬ್ಬ ನಟಿ ರಮ್ಯಾ, 'ನನ್ನ ಸ್ನೇಹಿತರ ವಲಯದಲ್ಲಿ ಗಮನಿಸಿದಂತೆ ಹೆಚ್ಚಿನ ಮಂದಿ ಪ್ರೀತಿಗೆ ಮೊದಲ ಆದ್ಯತೆ ಕೊಡುವುದನ್ನು ಕಂಡಿದ್ದೇನೆ. ಅದು ಅವರ ವೈಯಕ್ತಿಕ ವಿಷಯವೇ ಇರಬಹುದು. ಆದ್ರೆ, ಇದು ಮೊದಲೇ ಸ್ಪರ್ಧಾಯುಗ. ವೃತ್ತಿ ಬದುಕು ಇಲ್ಲಿ ಹೆಚ್ಚು ಪ್ರಾಮುಖ್ಯ ಪಡೆಯುತ್ತದೆ. ನನ್ನ ವೃತ್ತಿಯಲ್ಲಿ ಪ್ರೀತಿ, ಪ್ರೇಮ ಅಂತ ಹೋದ್ರೆ ವೃತ್ತಿಪರತೆ ರೂಢಿಸಿಕೊಳ್ಳುವುದು ಕಷ್ಟವಾಗುತ್ತದೆ. ನನಗೆ ವೈಯಕ್ತಿಕವಾಗಿ ಲವ್ ಮ್ಯಾರೇಜ್‌ನಲ್ಲಿ ನಂಬಿಕೆ ಇಲ್ಲ. ಅಪ್ಪ-ಅಮ್ಮ ಇಷ್ಟಪಟ್ಟ ಹುಡುಗನನ್ನೇ ಮದುವೆ ಆಗ್ತೇನೆ. ಆದ್ರೆ ಇಷ್ಟು ಬೇಗ ಅಲ್ಲ ಅದಕ್ಕಿನ್ನೂ ಸಮಯವಿದೆ' ಎಂದು ವಿಶ್ವಾಸದಿಂದ ಹೇಳುತ್ತಾರೆ.



ರಮ್ಯಾ

ಆರ್.ಕೆ

www.rohininilekani.org